# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ವಿಫಲಗೊಳ್ಳುವ ವಿತರಣಾ ಪರಿವರ್ತಕಗಳ ದುರಸ್ತಿ ಕಾರ್ಯವನ್ನು M/s. KAVIKA ಸಂಸ್ಥೆಯಿಂದ ಕೈಗೊಳ್ಳಲು ದುರಸ್ತಿ ಕಾರ್ಯಕ್ಕೆ ತಗಲುವ ದರವನ್ನು ನಿಗದಿಪಡಿಸಲು ಸಮಿತಿ ರಚಿಸುವ ಬಗ್ಗೆ.

*******

**ಹಿನ್ನೆಲೆ:-**

1. M/s. KAVIKA ಸಂಸ್ಥೆಯು ವಿತರಣಾ ಪರಿವರ್ತಕಗಳ ಉತ್ಪಾದನೆಯ ಜೊತೆಗೆ ವಿಫಲಗೊಳ್ಳುವ ಪರಿವರ್ತಕಗಳ ದುರಸ್ತಿ ಕಾರ್ಯವನ್ನು ಸಹ ಕೈಗೊಳ್ಳಲು ನಿರ್ಧರಿಸಿರುವುದಾಗಿ ವ್ಯವಸ್ಥಾಪಕ ನಿರ್ದೇಶಕರು, M/s. KAVIKA ರವರು ತಿಳಿಸಿದ್ದು, ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ವಿಫಲಗೊಳ್ಳುವ ಪರಿವರ್ತಕಗಳ ದುರಸ್ತಿ ಕಾರ್ಯವನ್ನು ಕೈಗೊಳ್ಳಲು ಕೆ.ಟಿ.ಪಿ.ಪಿ. ಕಾಯ್ದೆಯಡಿ ವಿನಾಯಿತಿ ನೀಡುವಂತೆ ಕೋರಿರುತ್ತಾರೆ.
2. M/s. KAVIKA ಸಂಸ್ಥೆಯಿಂದ ದುರಸ್ತಿ ಕಾರ್ಯವನ್ನು ಕೈಗೊಳ್ಳಲು ಕೆ.ಟಿ.ಪಿ.ಪಿ. ಕಾಯ್ದೆಯಡಿ ವಿನಾಯಿತಿ ನೀಡುವಂತೆ ಕೋರಿ ಆರ್ಥಿಕ ಇಲಾಖೆಗೆ ಸಲ್ಲಿಸಲಾಗಿದ್ದ ಪ್ರಸ್ತಾವನೆಗೆ ಆರ್ಥಿಕ ಇಲಾಖೆಯು ದಿನಾಂಕ 07-11-2018 ರಂದು ಅಧಿಸೂಚನೆಯನ್ನು ಹೊರಡಿಸಿ, M/s. KAVIKA ಸಂಸ್ಥೆಯಿಂದ ಪರಿವರ್ತಕಗಳನ್ನು ದುರಸ್ತಿಗೊಳಿಸಲು ಕೆ.ಟಿ.ಪಿ.ಪಿ. ಕಾಯ್ದೆಯ ಕಲಂ 4(ಜಿ) ಅಡಿ ವಿನಾಯಿತಿ ನೀಡಿರುತ್ತಾರೆ.
3. ಈ ಸಂಬಂಧ, ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ವಿಫಲಗೊಳ್ಳುವ ವಿತರಣಾ ಪರಿವರ್ತಗಳ ದುರಸ್ತಿ ಕಾರ್ಯವನ್ನು M/s. KAVIKA ಸಂಸ್ಥೆಯಿಂದ ಕೈಗೊಳ್ಳಲು ದುರಸ್ತಿ ದರವನ್ನು ನಿಗದಿಪಡಿಸಬೇಕಾಗಿರುತ್ತದೆ. ಈ ಹಿನ್ನೆಲೆಯಲ್ಲಿ, ಅಪರ ಮುಖ್ಯ ಕಾರ್ಯದರ್ಶಿಯವರು ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ ರವರ ಅಧ್ಯಕ್ಷತೆಯಲ್ಲಿ, ವ್ಯವಸ್ಥಾಪಕ ನಿರ್ದೇಶಕರು, ಸೆಸ್ಕ್ ಹಾಗೂ ನಿರ್ದೇಶಕರು (ತಾಂತ್ರಿಕ), ಬೆಸ್ಕಾಂ ಮತ್ತು ನಿರ್ದೇಶಕರು (ತಾಂತ್ರಿಕ), ಸೆಸ್ಕ್ ರವರುಗಳನ್ನೊಳಗೊಂಡ ಸಮಿತಿಯನ್ನು ರಚಿಸುವಂತೆ ಸೂಚಿಸಿರುತ್ತಾರೆ. ಸದರಿ ಸಮಿತಿಯು M/s. KAVIKA ಸಂಸ್ಥೆಯಿಂದ ದುರಸ್ತಿಗೊಳ್ಳುವ ವಿತರಣಾ ಪರಿವರ್ತಕಗಳ ದುರಸ್ತಿ ದರವನ್ನು ನಿಗದಿಪಡಿಸಬೇಕಾಗಿರುತ್ತದೆ.

ಅದರಂತೆ, ಕೆಳಕಂಡ ಆದೇಶ ಹೊರಡಿಸಲಾಗಿದೆ.

**ಸರ್ಕಾರಿ ಆದೇಶ ಸಂಖ್ಯೆ ಇಎನ್ 248 ವಿಎಸ್‌ಸಿ 2018, ಬೆಂಗಳೂರು, ದಿನಾಂಕ: 14-11-2018**

**"ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ವಿಫಲಗೊಳ್ಳುವ ವಿತರಣಾ ಪರಿವರ್ತಕಗಳ ದುರಸ್ತಿ ಕಾರ್ಯವನ್ನು M/s. KAVIKA ಸಂಸ್ಥೆಯಿಂದ ಕೈಗೊಳ್ಳಲು ದುರಸ್ತಿ ಕಾರ್ಯಕ್ಕೆ ತಗಲುವ ದರವನ್ನು ನಿಗದಿಪಡಿಸಲು ಕೆಳಕಂಡ ಸದಸ್ಯರುಗಳನ್ನೊಳಗೊಂಡ ಸಮಿತಿ ರಚಿಸಲಾಗಿದೆ".**

## ಸಮಿತಿಯ ಸದಸ್ಯರುಗಳು

| | | |
|---|---|---|
| 1. | ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ. | ಅಧ್ಯಕ್ಷರು |
| 2. | ವ್ಯವಸ್ಥಾಪಕ ನಿರ್ದೇಶಕರು, ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ | ಸದಸ್ಯರು |
| 3. | ನಿರ್ದೇಶಕರು(ತಾಂತ್ರಿಕ), ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ | ಸದಸ್ಯರು |
| 4. | ನಿರ್ದೇಶಕರು (ತಾಂತ್ರಿಕ), ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ | ಸದಸ್ಯರು & ಸಂಚಾಲಕರು |

## ಸಮಿತಿಯು ಅನುಸರಿಸಬೇಕಾದ ನಿಯಮಗಳು

1. ವಿವಿಧ ಸಾಮರ್ಥ್ಯದ ವಿತರಣಾ ಪರಿವರ್ತಕಗಳ ದುರಸ್ತಿ ದರವನ್ನು ಇತರೆ ಪರಿವರ್ತಕ ದುರಸ್ತಿ ಕೇಂದ್ರಗಳ ದುರಸ್ತಿ ದರಗಳೊಂದಿಗೆ ಪರಾಮರ್ಶಿಸಿ, ಸಮಂಜಸ ದರಗಳನ್ನು ನಿಗದಿಪಡಿಸುವುದು.
2. ಒಂದು ವೇಳೆ, ದುರಸ್ತಿ ದರದಲ್ಲಿ ಯಾವುದೇ ಬದಲಾವಣೆಗಳ ಅವಶ್ಯಕತೆಯಿದ್ದಲ್ಲಿ, ವಿದ್ಯುತ್ ಸರಬರಾಜು ಕಂಪನಿಗಳು ಸಮಿತಿಯ ಗಮನಕ್ಕೆ ತರದೇ ಯಾವುದೇ ಬದಲಾವಣೆಗಳನ್ನು ಕೈಗೊಳ್ಳುವಂತಿಲ್ಲ.

**ಸಮಿತಿಯು 15 ದಿನಗಳೊಳಗೆ ವಿತರಣಾ ಪರಿವರ್ತಕಗಳ ದುರಸ್ತಿ ದರವನ್ನು ನಿಗದಿಪಡಿಸಲು ಕ್ರಮ ವಹಿಸುವುದು.**

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಬಿ.ವಿ ಶ್ರೀನಿವಾಸಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ
14/11/18 ಇಂಧನ ಇಲಾಖೆ

ಇವರಿಗೆ:-
ಸಂಕಲನಕಾರರು, ಸರ್ಕಾರಿ ಮುದ್ರಣಾಲಯ, ಕರ್ನಾಟಕ ರಾಜ್ಯಪತ್ರ ಪ್ರಕಟಣೆಗಾಗಿ.

ಪ್ರತಿ:-
1. ಮಾನ್ಯ ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ಶಕ್ತಿ ಭವನ, ಬೆಂಗಳೂರು.
3. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಕಾವೇರಿ ಭವನ, ಬೆಂಗಳೂರು.
4. ವ್ಯವಸ್ಥಾಪಕ ನಿರ್ದೇಶಕರು, ಪವರ್ ಕಂಪನಿ ಆಫ್ ಕರ್ನಾಟಕ ಲಿಮಿಟೆಡ್, ಕಾವೇರಿ ಭವನ, ಬೆಂಗಳೂರು.

5. ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ, ಮೆಸ್ಕಾಂ, ಜೆಸ್ಕಾಂ, ಹೆಸ್ಕಾಂ, ಸೆಸ್ಕ್ ಮತ್ತು ಹುಕ್ಕೇರಿ ಗ್ರಾ.ವಿ.ಅ.ಸ.ಸಂ
6. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ಕಾರ್ಖಾನೆ ನಿಯಮಿತ, ಅಂಚೆ ಪೆಟ್ಟಿಗೆ ಸಂಖ್ಯೆ: 2610, ಮೈಸೂರು ರಸ್ತೆ, ಬೆಂಗಳೂರು – 560 026
7. ಕಾರ್ಯದರ್ಶಿಗಳು, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, ಬೆಂಗಳೂರು.
8. ಮುಖ್ಯ ವಿದ್ಯುತ್ ಪರಿವೀಕ್ಷಕರು, ನಿರ್ಮಾಣ ಭವನ, 2ನೇ ಮಹಡಿ, ಡಾ॥ ರಾಜ್‌ಕುಮಾರ್ ರಸ್ತೆ, ಬೆಂಗಳೂರು.
9. ನಿರ್ದೇಶಕರು (ಪ್ರಸರಣ), ಕೆಪಿಟಿಸಿಎಲ್, ಕಾವೇರಿ ಭವನ, ಬೆಂಗಳೂರು
10. ನಿರ್ದೇಶಕರು (ತಾಂತ್ರಿಕ), ಬೆಸ್ಕಾಂ, ಮೆಸ್ಕಾಂ, ಜೆಸ್ಕಾಂ, ಹೆಸ್ಕಾಂ, ಸೆಸ್ಕ್.
11. ವಿಶೇಷಾಧಿಕಾರಿ (ಸುಧಾರಣೆ) /ಜಂಟಿ ನಿರ್ದೇಶಕರು (ಯೋಜನೆ/ಇ.ಎಂ.ಸಿ– 2 &3), ಇಂಧನ ಇಲಾಖೆ.
12. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಇಂಧನ ಇಲಾಖೆ.
13. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಇಂಧನ ಇಲಾಖೆ.
14. ಸರ್ಕಾರದ ಅಧೀನ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಇಂಧನ ಇಲಾಖೆ.
15. ಶಾಖಾ ರಕ್ಷಾ ಕಡತ/ಕಛೇರಿ ಪ್ರತಿ/ಹೆಚ್ಚುವರಿ ಪ್ರತಿಗಳು.

ಸಂಖ್ಯೆ:ಆಇ 1142 ವೆಚ್ಚ-12/18

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನ ಸೌಧ
ಬೆಂಗಳೂರು, ದಿನಾಂಕ:07.11.2018

## ಅಧಿಸೂಚನೆ

ರಾಜ್ಯದ ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳಲ್ಲಿನ ವಿಫಲಗೊಳ್ಳುವ ಪರಿವರ್ತಕಗಳ ದುರಸ್ತಿ ಕಾರ್ಯವನ್ನು ಸರ್ಕಾರಿ ಸ್ವಾಮ್ಯದ ಸಂಸ್ಥೆಯಾದ ಮೆ: KAVIKA ರವರಿಗೆ ನೇರವಾಗಿ ವಹಿಸಲು ಕರ್ನಾಟಕ ಸಾರ್ವಜನಿಕ ಸಂಗಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ-1999ರ ಕಲಂ 4(ಜಿ) ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ, ಇಂಧನ ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿದೆ.

ಉತ್ತಮ ಗುಣಮಟ್ಟದ ಸೇವೆಯನ್ನು ಸಮಂಜಸ ದರದಲ್ಲಿ ಸಂಗ್ರಹಿಸುವುದನ್ನು ಇಂಧನ ಇಲಾಖೆಯು ದೃಢಪಡಿಸಿಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಪಿ.ಎನ್. ಕೃಷ್ಣಮೂರ್ತಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಂಗ್ರಹಣಾ ಕೋಶ)

ಇವರಿಗೆ:

ಜಂಟಿ ನಿರ್ದೇಶಕರು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಮುದ್ರಣಾಲಯ, ಆರ್.ವಿ.ಕಾಲೇಜು ಅಂಚೆ, ಮೈಸೂರು ರಸ್ತೆ, ಕೆಂಗೇರಿ, ಬೆಂಗಳೂರು-59, ಮುಂದಿನ ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಿಸುವ ಸಲುವಾಗಿ ಹಾಗೂ 25 ಮುದ್ರಿತ ಪ್ರತಿಗಳನ್ನು ಸರಬರಾಜು ಮಾಡಲು ಕೋರಿದೆ.

ಪ್ರತಿ:

1) ಮಹಾಲೇಖಪಾಲರು (ಲೆಕ್ಕ ಮತ್ತು ಪರಿಶೋಧನೆ), ಬೆಂಗಳೂರು.
2) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಇಂಧನ ಇಲಾಖೆ.
3) ನಿರ್ದೇಶಕರು, ರಾಜ್ಯ ಪತ್ರಾಗಾರ ಇಲಾಖೆ, ವಿಕಾಸಸೌಧ, ಬೆಂಗಳೂರು - 10 ಪ್ರತಿಗಳು.
4) ಹೆಚ್ಚುವರಿ ಪ್ರತಿ.